

بسم اللهِ الرّحمٰن الرّحيم

# ಹಝ್ರತ್ ಅಲಿ(ರ).

## ಮೌಲಾನ ಮುಹಮ್ಮದ್ ಉಮರ್ ಸಾಹಿಬರ ಸ್ಮರಣೆ.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22-01-2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ಶುರುಮಾಡುತ್ತೇನೆ. ಹಝ್ರತ್ ಉಸ್ಮಾನ್(ರ)ರ ಬಗ್ಗೆ ನೆನಪಿಡಬೇಕಾದ ಮೊದಲ ಸಂಗತಿಯೇನೆಂದರೆ, ಇವರು ಸ್ವತಃ ಬದ್ರ್ ಯುದ್ಧದಲ್ಲಿ ಭಾಗವಹಿಸಿರಲಿಲ್ಲ. ಆದರೆ ಬದ್ರ್ ಯುದ್ಧದ ಯುದ್ಧ ಸಂಪತ್ತಿನಿಂದ ಒಂದು ಭಾಗವನ್ನು ಕೊಟ್ಟು ಹಝ್ರತ್ ಪೈಗಂಬರ್(ಸ) ಯುದ್ಧದಲ್ಲಿ ಭಾಗಿಯನ್ನಾಗಿ ಗಣಿಸಿದ್ದ ಎಂಟು ಸೌಭಾಗ್ಯಶಾಲಿಯರಲ್ಲಿ ಅವರು ಸೇರಿದ್ದರು. ಅವರ ಕುಟುಂಬ ಪರಂಪರೆ ಹೀಗಿದೆ: ಉಸ್ಮಾನ್ ಬಿನ್ ಅಫ್ಫಾನ್ ಬಿನ್ ಅಬುಲ್‌ಆಸ್ ಬಿನ್ ಉಮಯ್ಯ ಬಿನ್ ಅಬ್ದುಶ್ಶಮ್ಸ್ ಬಿನ್ ಅಬ್ದುಮನಾಫ್ ಬಿನ್ ಖುಸಯ್ಯ್ ಬಿನ್ ಕಿಲಾಬ್. ಹೀಗೆ ಇವರ ಕುಟುಂಬ ಪರಂಪರೆ ಹಝ್ರತ್ ಪೈಗಂಬರ್(ಸ)ರ ಕುಟುಂಬ ಪರಂಪರೆಯೊಂದಿಗೆ ಐದನೇ ತಲಮಾರಿನಲ್ಲಿ ಅಬ್ದು ಮನಾಫ್‌ರೊಂದಿಗೆ ಸೇರುತ್ತದೆ. ಹಝ್ರತ್ ಉಸ್ಮಾನ್(ರ)ರ ಅಜ್ಜಿ ಹಝ್ರತ್ ಪೈಗಂಬರ್(ಸ)ರ ತಂದೆಯ ಸ್ವಂತ ಸಹೋದರಿಯಾಗಿದ್ದರು. ಹಝ್ರತ್ ಉಸ್ಮಾನ್(ರ)ರ ತಾಯಿ ಅರ್‌ವ ಬಿನ್ತ್ ಕುರೈಝ್ ಹುದೈಬಿಯಾ ಸಂಧಿಯ ನಂತರ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದರು ಮತ್ತು ಹಿಜ್ರತ್ ಮಾಡಿ ಮದೀನಕ್ಕೆ ಹೋಗಿದ್ದರು. ತನ್ನ ಮಗನಾದ ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ, ನಿಧನರಾಗುವ ತನಕ ಮದೀನದಲ್ಲೇ ಇದ್ದರು. ಹಝ್ರತ್ ಉಸ್ಮಾನ್(ರ)ರ ತಂದೆ ಜಾಹಿಲಿಯ್ಯತಿನ ಕಾಲದಲ್ಲೇ ಮೃತಪಟ್ಟಿದ್ದರು. ಹಝ್ರತ್ ಪೈಗಂಬರ್(ಸ) ತನ್ನ ಮಗಳಾದ ರುಖಿಯರ ವಿವಾಹ ಹಝ್ರತ್ ಉಸ್ಮಾನ್‌ರೊಂದಿಗೆ ನಡೆಸಿದ್ದರು. ಅವರು ಬದ್ರ್ ಯುದ್ಧದ ದಿನಗಳಲ್ಲಿ ಮೃತಪಟ್ಟರು. ಆಗ ಹಝ್ರತ್ ಪೈಗಂಬರ್(ಸ) ತನ್ನ ಎರಡನೇ ಮಗಳಾದ ಹಝ್ರತ್ ಉಮ್ಮುಕುಲ್‌ಸೂಮ್‌ರ ವಿವಾಹ ಹಝ್ರತ್ ಉಸ್ಮಾನ್(ರ)ರೊಂದಿಗೆ ನಡೆಸಿದ್ದರು. ಇದೇ ಕಾರಣದಿಂದ ಹಝ್ರತ್ ಉಸ್ಮಾನ್‌ರನ್ನು **ಧುನ್ನೂರೈನ್** ಎಂದು ಕರೆಯಲಾಗುತ್ತಿತ್ತು. ಎಂದರೆ ಎರಡು ಪ್ರಕಾಶಗಳುಳ್ಳವರು.

ಹಝ್ರತ್ ಉಸ್ಮಾನ್(ರ) **ಅಸ್‌ಹಾಬುಲ್ ಫೀಲ್‌ನ** ಘಟನೆಯ ಆರು ವರ್ಷಗಳ ನಂತರ ಮಕ್ಕದಲ್ಲಿ ಹುಟ್ಟಿದರು. ಅವರು ಹಝ್ರತ್ ಪೈಗಂಬರ್(ಸ)ರಿಗಿಂತ ಸುಮಾರು ಐದು ವರ್ಷ ಚಿಕ್ಕವರಾಗಿದ್ದರು. ಅವರ ಇಸ್ಲಾಂ ಧರ್ಮ ಸ್ವೀಕಾರದ ಬಗ್ಗೆ ಹೀಗೆ ವರದಿಯಾಗಿದೆ: ಒಂದು ಬಾರಿ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಮತ್ತು ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ಇಬ್ಬರೂ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಪೈಗಂಬರ್(ಸ) ಅವರಿಬ್ಬರ ಮುಂದೆ ಇಸ್ಲಾಮಿನ ಸಂದೇಶವನ್ನು ಇರಿಸಿದರು. ಅವರಿಗೆ ಪವಿತ್ರ ಖುರ್‌ಆನ್ ಓದಿ ಹೇಳಿದರು ಮತ್ತು ಅವರಿಗೆ ಇಸ್ಲಾಮಿನ ಹಕ್ಕುಗಳ ಬಗ್ಗೆ ಹೇಳಿಕೊಟ್ಟರು. ಅಲ್ಲಾಹನಿಂದ ಲಭಿಸುವ ಗೌರವಾದರಗಳ ಕುರಿತು ಅವರಿಗೆ ವಾಗ್ದಾನ ನೀಡಿದರು. ಹೀಗೆ ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ತಲ್‌ಹ(ರ) ಇಬ್ಬರೂ ಸತ್ಯವಿಶ್ವಾಸ ಸ್ವೀಕರಿಸಿದರು ಮತ್ತು ಹಝ್ರತ್ ಪೈಗಂಬರ್(ಸ)ರನ್ನು ಸತ್ಯಪಡಿಸಿದರು. ಹಝ್ರತ್ ಪೈಗಂಬರ್(ಸ) ದಾರುಲ್ ಅರ್ಖಮ್‌ನಲ್ಲಿ ಪ್ರವೇಶಿಸುವುದಕ್ಕೆ ಮುಂಚೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಆರಂಭದ ಕೆಲವು ಜನರಲ್ಲಿ ಹಝ್ರತ್ ಉಸ್ಮಾನ್(ರ) ಒಳಪಟ್ಟಿದ್ದರು.

ಇಸ್ಲಾಂ ಧರ್ಮ ಸ್ವೀಕರಿಸಿದ ನಂತರ ಅವರ ಮೇಲೆ ದೌರ್ಜನ್ಯಗಳು ಸಹ ನಡೆಯಿತು. ಮೂಸಾ ಬಿನ್ ಮುಹಮ್ಮದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಇಸ್ಲಾಂ ಸ್ವೀಕರಿಸಿದಾಗ ಅವರನ್ನು ಅವರ ಚಿಕ್ಕಪ್ಪರಾದ ಹಕಂ ಬಿನ್ ಅಬುಲ್‌ಆಸ್ ಬಿನ್ ಉಮಯ್ಯ ಹಿಡಿದುಕೊಂಡು ಹಗ್ಗದಿಂದ ಕಟ್ಟಿದರು ಮತ್ತು ಹೀಗೆ ಹೇಳಿದರು: ಏನು, ನೀನು ನಿನ್ನ ತಂದೆ ತಾತಂದಿರ ಧರ್ಮವನ್ನು ಬಿಟ್ಟುಕೊಂಡು ಹೊಸ ಧರ್ಮವನ್ನು ಸ್ವೀಕರಿಸಿದ್ದೀಯ? ದೇವನಾಣೆ, ನೀನು ನಿನ್ನ ಈ ಹೊಸ ಧರ್ಮವನ್ನು ಉಪೇಕ್ಷಿಸುವ ವರೆಗೆ ನಾನು ನಿನಗೆ ಕಟ್ಟಿದ ಹಗ್ಗವನ್ನು ಖಂಡಿತವಾಗಿಯೂ ಬಿಡಿಸುವುದಿಲ್ಲ. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹನಾಣೆ, ನಾನು ಅದನ್ನು ಖಂಡಿತ ಉಪೇಕ್ಷಿಸುವುದಿಲ್ಲ ಮತ್ತು ಅದರಿಂದ ಎಂದಿಗೂ ಬಿಟ್ಟು ನಿಲ್ಲುವುದಿಲ್ಲ. ಅವರಿಗೆ ಧರ್ಮದಲ್ಲಿದ್ದ ದೃಢಚಿತ್ತತೆಯ ಈ ಸ್ಥಿತಿಯನ್ನು ಕಂಡಾಗ ಹಕಂ ಯಾವುದೇ ನಿರ್ವಾಹವಿಲ್ಲದೆ ಅವರನ್ನು ಬಿಟ್ಟುಬಿಟ್ಟರು.

ಹಝ್ರತ್ ಪೈಗಂಬರ್(ಸ)ರ ಮಗಳಾದ ರುಖಿಯ(ರ)ರ ವಿವಾಹ ಹಝ್ರತ್ ಉಸ್ಮಾನ್(ರ)ರೊಂದಿಗೆ ಮಕ್ಕದಲ್ಲೇ ನಡೆದಿತ್ತು. ಹಝ್ರತ್ ಉಸ್ಮಾನ್(ರ) ಅವರೊಂದಿಗೆ ಅಬಿಸೀನಿಯಾದ ಕಡೆಗೆ ವಲಸೆ ಹೋಗಿದ್ದರು. ಹಝ್ರತ್ ರುಖಿಯ(ರ) ಮತ್ತು ಹಝ್ರತ್ ಉಸ್ಮಾನ್(ರ) ಇಬ್ಬರೂ ಅತುಲ್ಯವಾದ ಸೌಂದರ್ಯವನ್ನು ಹೊಂದಿದ್ದರು. ಅವರ ಬಗ್ಗೆ ಹೀಗೆ ಹೇಳಲಾಗುತ್ತದೆ: **ಅಹ್‌ಸನ ಝೌಜೈನಿ ರಆಹುಮಾ ಇನ್ಸಾನುನ್ ರುಖಿಯ್ಯತು ವ ಝೌಜುಹಾ ಉಸ್ಮಾನ್.** ಎಂದರೆ ಮನುಷ್ಯನು ನೋಡಿದ ಅತ್ಯಂತ

ಸುಂದರವಾದ ಜೋಡಿ ಹಝ್ರತ್ ರುಖಿಯ(ರ) ಮತ್ತು ಅವರ ಪತಿಯಾದ ಹಝ್ರತ್ ಉಸ್ಮಾನ್(ರ) ಆಗಿರುವರು.

ಅಬ್ದುರ್ರಹ್ಮಾನ್ ಬಿನ್ ಉಸ್ಮಾನ್ ಖುರ್‌ಶಿ ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ಪೈಗಂಬರ್(ಸ) ತನ್ನ ಮಗಳ ಮನೆಗೆ ಹೋದರು. ಆ ವೇಳೆ ಅವರು ಹಝ್ರತ್ ಉಸ್ಮಾನ್(ರ)ರ ತಲೆಯನ್ನು ತೊಳೆಯುತ್ತಿದ್ದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು ಮಗಳೇ, ಅಬೂ ಅಬ್ದುಲ್ಲಾಹ್ (ಎಂದರೆ ಹಝ್ರತ್ ಉಸ್ಮಾನ್(ರ))ರೊಂದಿಗೆ ಉತ್ತಮವಾದ ರೀತಿಯಲ್ಲಿ ವರ್ತಿಸು. ಏಕೆಂದರೆ ಇವರು ನನ್ನ ಸಹಾಬಿಯರಲ್ಲಿ ಸ್ವಭಾವದ ದೃಷ್ಟಿಯಲ್ಲಿ ನನಗೆ ಅತ್ಯಂತ ಸಾಮ್ಯತೆಯುಳ್ಳವರಾಗಿರುವರು.

ಹಝ್ರತ್ ಪೈಗಂಬರ್(ಸ) ತನ್ನ ಸಹಾಬಿಯರ ಮೇಲೆ ಆಗುತ್ತಿದ್ದ ಪರೀಕ್ಷಣೆ ಮತ್ತು ಅವರ ಮೇಲೆ ನಡೆಯುತ್ತಿದ್ದ ದೌರ್ಜನ್ಯಗಳನ್ನು ನೋಡಿಕೊಂಡು ಸಹಾಬಿಯರೊಡನೆ ಹೇಳಿದರು: ನೀವು ಅಬಿಸೀನಿಯಕ್ಕೆ ಹೋಗುವುದಾದರೆ, ಅಲ್ಲಿ ಯಾರ ಮೇಲೂ ದೌರ್ಜನ್ಯ ಮಾಡದ ಒಬ್ಬ ಅರಸ ಇದ್ದಾನೆ. ಅದು ಸತ್ಯದ ಪ್ರದೇಶವಾಗಿದೆ ಎಂದು ಹೇಳಿದರು. ಹೀಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೆಲವು ಸಹಾಬಿಯರು ಅಬಿಸೀನಿಯದ ಕಡೆಗೆ ವಲಸೆ ಹೋದರು. ಇದು ಇಸ್ಲಾಮಿನಲ್ಲಿ ನಡೆದ ಮೊದಲ ಹಿಜ್ರತ್ ಆಗಿತ್ತು. ಅಬಿಸೀನಿಯದ ಕಡೆಗೆ ಹಿಜ್ರತ್ ಮಾಡಿದ ಸಹಾಬಿಯರಲ್ಲಿ ಹಝ್ರತ್ ಉಸ್ಮಾನ್(ರ) ಸಹ ತನ್ನ ಪತ್ನಿಯಾದ ಹಝ್ರತ್ ರುಖಿಯ ಬಿನ್ತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಇದ್ದರು.

ಹಝ್ರತ್ ಸಅದ್ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಅಬಿಸೀನಿಯದ ಕಡೆಗೆ ಹಿಜ್ರತ್ ಮಾಡಲು ಉದ್ದೇಶಿಸಿದಾಗ ಹಝ್ರತ್ ಪೈಗಂಬರ್(ಸ) ಅವರೊಡನೆ ಹೇಳಿದರು: ರುಖಿಯಳನ್ನು ಸಹ ನಿಮ್ಮೊಂದಿಗೆ ಕೊಂಡುಹೋಗಿರಿ. ನೀವು ಪರಸ್ಪರ ಧೈರ್ಯ ತುಂಬಿಸುವಿರಿ ಎಂದು ನಾನು ಭಾವಿಸುತ್ತೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಬಕರ್, ಹಝ್ರತ್ ಲೂತ್(ಅ) ಮತ್ತು ಹಝ್ರತ್ ಇಬ್ರಾಹೀಮ್(ಅ)ರ ನಂತರ ಹಿಜ್ರತ್ ಮಾಡುವ ಮೊತ್ತಮೊದಲ ಇಬ್ಬರು ವ್ಯಕ್ತಿಗಳು ಉಸ್ಮಾನ್ ಮತ್ತು ರುಖಿಯ ಆಗಿದ್ದಾರೆ.

ಅಬಿಸೀನಿಯದಿಂದ ಅವರ ಮರಳುವಿಕೆಯ ಘಟನೆ ಸಹ ವರದಿಯಾಗಿದೆ. ಖುರೈಶಿಗಳು ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವರು ಎಂಬ ತಪ್ಪಾದ ಸುದ್ದಿ ಅಬಿಸೀನಿಯದಲ್ಲಿ ಹರಡಿದ ಕಾರಣದಿಂದ ಕೆಲವು ಸಹಾಬಿಯರು ತಮ್ಮ ನಾಡಿಗೆ ಮರಳಿ ಬಂದರು. ಅವರೊಂದಿಗೆ ಹಝ್ರತ್ ಉಸ್ಮಾನ್ ಸಹ ಮರಳಿ ಬಂದರು. ಇದು ತಪ್ಪು ವಾರ್ತೆಯಾಗಿತ್ತೆಂದು ಮಕ್ಕಕ್ಕೆ ತಲಪಿದಾಗ ಅವರಿಗೆ ಗೊತ್ತಾಯಿತು. ಈ ಕಾರಣದಿಂದ ಕೆಲವು ಸಹಾಬಿಯರು ಪುನಃ ಅಬಿಸೀನಿಯದ ಕಡೆಗೆ ವಾಪಾಸ್ಸು ಹೋದರು. ಆದರೆ ಮದೀನಕ್ಕೆ ಹಿಜ್ರತ್ ಹೋಗುವ ಕಾಲ ಬರುವ ವರೆಗೂ ಹಝ್ರತ್ ಉಸ್ಮಾನ್(ರ) ಮಕ್ಕದಲ್ಲೇ ನಿಂತರು. ಹಝ್ರತ್ ಪೈಗಂಬರ್(ಸ) ತಮ್ಮ ಎಲ್ಲ ಸಹಾಬಿಯರೊಡನೆ ಮದೀನಕ್ಕೆ ಹಿಜ್ರತ್ ಹೋಗಲು ಆದೇಶಿಸಿದರು. ಹೀಗೆ ಹಝ್ರತ್ ಉಸ್ಮಾನ್(ರ) ಸಹ ತಮ್ಮ ಕುಟುಂಬ ಸಮೇತ ಮದೀನಕ್ಕೆ ಹೋದರು.

ಹಝ್ರತ್ ಉಸ್ಮಾನ್(ರ)ರ ಮದೀನದ ಕಡೆಗೆ ಹಿಜ್ರತ್ ಮತ್ತು ಅವರ ಸಾಹೋದರ್ಯ ಸಂಬಂಧ ಸ್ಥಾಪನೆಯ ಪ್ರಸ್ತಾಪ ಹೀಗೆ ಬರುತ್ತದೆ: ಹಝ್ರತ್ ಉಸ್ಮಾನ್(ರ) ಮಕ್ಕದಿಂದ ಮದೀನಕ್ಕೆ ಹಿಜ್ರತ್ ಮಾಡಿದಾಗ ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ)ರ ನಡುವೆ ಹಝ್ರತ್ ಪೈಗಂಬರ್(ಸ) ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದರು. ಒಂದು ವರದಿಯ ಪ್ರಕಾರ ಹಝ್ರತ್ ಉಸ್ಮಾನ್(ರ)ರ ಸಾಹೋದರ್ಯ ಸಂಬಂಧವನ್ನು ಹಝ್ರತ್ ಪೈಗಂಬರ್(ಸ) ತಮ್ಮೊಂದಿಗೆ ಸ್ಥಾಪಿಸಿದ್ದಾಗಿ ಬಂದಿದೆ. ತಬ್‌ಖಾತುಲ್ ಕುಬ್ರದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಉಸ್ಮಾನ್(ರ)ರನ್ನು ವಿರೋಧಿಗಳು ಸುತ್ತುವರೆದು ಬಂಧಿಯಾಗಿ ಮಾಡಿದಾಗ ಕೊಠಡಿಯ ಎತ್ತರದಲ್ಲಿ ಇದ್ದ ಕಿಟಕಿಯಿಂದ ಇಣುಕುತ್ತಾ ಹಝ್ರತ್ ಉಸ್ಮಾನ್(ರ) ಜನರೊಡನೆ ಕೇಳಿದರು: ನಿಮ್ಮ ನಡುವೆ ತಲ್‌ಹ ಇದ್ದಾರೆಯೇ? ಹೌದೆಂದು ಜನರು ಹೇಳಿದರು. ಅವರು ಹೇಳಿದರು: ಮುಹಾಜಿರರ ಮತ್ತು ಅನ್ಸಾರರ ನಡುವೆ ಹಝ್ರತ್ ಪೈಗಂಬರ್(ಸ) ಸಾಹೋದರ್ಯ ಸಂಬಂಧವನ್ನು ಸ್ಥಾಪಿಸಿದಾಗ, ಹಝ್ರತ್ ಪೈಗಂಬರ್(ಸ) ನನ್ನ ಸಾಹೋದರ್ಯ ಸಂಬಂಧವನ್ನು ತನ್ನೊಂದಿಗೆ ಸ್ಥಾಪಿಸಿದ್ದರು ಎಂಬುದು ನಿಮಗೆ ಗೊತ್ತೇ ಎಂದು ನಿಮ್ಮೊಡನೆ ಅಲ್ಲಾಹನ ಹೆಸರಲ್ಲಿ ಕೇಳುತ್ತೇನೆ. ಆಗ ಹಝ್ರತ್ ತಲ್‌ಹ(ರ) ಅಲ್ಲಾಹನಾಣೆ, ಇದು ಸರಿಯೇ ಆಗಿದೆ ಎಂದು ಹೇಳಿದರು.

ಹಝ್ರತ್ ಉಸ್ಮಾನ್(ರ)ರ ಹಝ್ರತ್ ಉಮ್ಮುಕುಲ್ಸುಮ್(ರ)ರೊಂದಿಗೆ ನಡೆದ ವಿವಾಹದ ಘಟನೆ ಹೀಗೆ ವರದಿಯಾಗಿದೆ: ಹಝ್ರತ್ ರುಖಿಯ(ರ)ರ ಮರಣದ ನಂತರ ಹಝ್ರತ್ ಪೈಗಂಬರ್(ಸ) ತನ್ನ ಮಗಳಾದ ಉಮ್ಮುಕುಲ್ಸುಮ್‌ರ ವಿವಾಹ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ)ರೊಂದಿಗೆ ಮಾಡಿಸಿಕೊಟ್ಟರು. ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್‌ರನ್ನು ಮಸೀದಿಯ ಬಾಗಿಲ ಬಳಿ ಭೇಟಿಯಾಗಿ ಹೀಗೆ ಹೇಳಿದರು: ಹೇ ಉಸ್ಮಾನ್, ಜಿಬ್ರೀಲ್ ನನಗೆ ಹೀಗೆ ತಿಳಿಸಿದ್ದಾರೆ: ರುಖಿಯಗೆ ನೀಡಲಾದಷ್ಟೇ ಮಹರಿನೊಂದಿಗೆ ಹಾಗೂ ಅದೇ ರೀತಿ ಉತ್ತಮವಾಗಿ ವರ್ತಿಸುವಿರಿ ಎಂಬ ಶರತ್ತಿನೊಂದಿಗೆ ಉಮ್ಮುಕುಲ್ಸೂಮ್‌ಳ ನಿಕಾಹನ್ನು ಅಲ್ಲಾಹನು ನಿಮ್ಮೊಂದಿಗೆ ಮಾಡಿದ್ದಾನೆ.

ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಉಮ್ಮುಕುಲ್ಸುಮ್(ರ)ರ ವಿವಾಹವನ್ನು ಹಝ್ರತ್ ಉಸ್ಮಾನ್(ರ)ರೊಂದಿಗೆ ಮಾಡಿಕೊಟ್ಟಾಗ, ಹಝ್ರತ್ ಪೈಗಂಬರ್(ಸ) ಹಝ್ರತ್ ಉಮ್ಮು ಐಮನ್(ರ)ರೊಡನೆ ಹೇಳಿದರು: ನನ್ನ ಮಗಳಾದ ಉಮ್ಮುಕುಲ್ಸುಮ್‌ಳನ್ನು ಶೃಂಗರಿಸಿ ಉಸ್ಮಾನ್‌ರ ಬಳಿ ಬಿಟ್ಟು ಬಾ. ಅವರ ಮುಂದೆ ದಫ್ ಬಾರಿಸು. ಅವರು ಹಾಗೆಯೇ ಮಾಡಿದರು. ಹಝ್ರತ್ ಪೈಗಂಬರ್(ಸ) ಮೂರು ದಿನಗಳ ನಂತರ ಹಝ್ರತ್ ಉಮ್ಮುಕುಲ್ಸುಮ್‌ರ ಬಳಿಗೆ ಹೋದರು ಮತ್ತು ಹೀಗೆ ಹೇಳಿದರು: ಹೇ ನನ್ನ ಪ್ರಿಯ ಪುತ್ರಿ, ನಿನ್ನ ಪತಿಯ ಬಗ್ಗೆ ನಿನ್ನ ಅಭಿಪ್ರಾಯವೇನು? ಹಝ್ರತ್ ಉಮ್ಮುಕುಲ್ಸುಮ್(ರ) ಹೇಳಿದರು: ಅವರು ಅತ್ಯುತ್ತಮ

ಪತಿಯಾಗಿರುವರು. ಹಝ್‌ರತ್ ಉಮ್ಮುಕುಲ್ಸುಮ್(ರ) ಹಝ್‌ರತ್ ಉಸ್ಮಾನ್(ರ)ರ ಬಳಿ ಹಿಜರೀ 9ರ ವರೆಗೆ ಇದ್ದರು. ಅನಂತರ ಅವರು ರೋಗಿಯಾಗಿ ಮೃತಪಟ್ಟರು. ಹಝ್‌ರತ್ ಪೈಗಂಬರ್(ಸ) ಅವರ ಜನಾಝ ನಮಾಝ್ ನಿರ್ವಹಿಸಿದರು ಮತ್ತು ಅವರ ಗೋರಿಯ ಬಳಿ ಕುಳಿತುಕೊಂಡರು. ಅವರ ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿತ್ತು. ಒಂದು ವರದಿಯ ಪ್ರಕಾರ ಹಝ್‌ರತ್ ಉಮ್ಮುಕುಲ್ಸುಮ್(ರ) ನಿಧನರಾದಾಗ ಹಝ್‌ರತ್ ಪೈಗಂಬರ್(ಸ) ಹೇಳಿದರು: ನನಗೆ ಮೂರನೇ ಪುತ್ರಿ ಇರುತ್ತಿದ್ದರೆ ಅವಳ ವಿವಾಹವನ್ನು ಸಹ ನಾನು ಹಝ್‌ರತ್ ಉಸ್ಮಾನ್(ರ)ರೊಂದಿಗೆ ಮಾಡುತ್ತಿದ್ದೆ. ಹಝ್‌ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್‌ರತ್ ಪೈಗಂಬರ್(ಸ) ಒಂದು ಸ್ಥಳದಿಂದ ದಾಟಿಹೋಗುತ್ತಿದ್ದಾಗ ಹಝ್‌ರತ್ ಉಸ್ಮಾನ್(ರ) ಹಝ್‌ರತ್ ಉಮ್ಮುಕುಲ್ಸುಮ್‌ರ ನಿಧನದ ದುಃಖದಿಂದ ಅಳುತ್ತಿರುವುದನ್ನು ಕಂಡರು. ನೀವು ಯಾಕೆ ಅಳುತ್ತಿದ್ದೀರಿ ಎಂದು ಹಝ್‌ರತ್ ಪೈಗಂಬರ್(ಸ) ಅವರೊಡನೆ ಕೇಳಿದರು. ಹಝ್‌ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹನ ರಸೂಲರೇ, ನಿಮ್ಮ ಅಳಿಯನೆಂಬ ನನ್ನ ಸಂಬಂಧ ಕೊನೆಗೊಂಡ ಕಾರಣದಿಂದ ನಾನು ಅಳುತ್ತಿದ್ದೇನೆ. ಹಝ್‌ರತ್ ಪೈಗಂಬರ್(ಸ) ಹೇಳಿದರು: ಅಳಬೇಡ. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನ ಹೆಸರಲ್ಲಿ ಆಣೆಹಾಕಿ ಹೇಳುತ್ತೇನೆ, ನನಗೆ ನೂರು ಪುತ್ರಿಯರು ಇದ್ದು ಅವರಲ್ಲಿ ಪ್ರತಿಯೊಬ್ಬರು ಒಬ್ಬೊಬ್ಬರಾಗಿ ಮೃತಪಟ್ಟರೂ ನಾನು ಪ್ರತಿಯೊಬ್ಬರ ನಂತರ ಅವರ ವಿವಾಹವನ್ನು ನಿಮಗೆ ಮಾಡಿಕೊಡುತ್ತಿದ್ದೆ. ಆ ನೂರರಲ್ಲಿ ಒಬ್ಬರೂ ಬಾಕಿಯಾಗಿ ಉಳಿಯದ ತನಕ ಹೀಗೆ ಮಾಡುತ್ತಿದ್ದೆ.

(ಹುಝೂರ್ ಹೇಳಿದರು:) ಇನ್‌ಶಾ ಅಲ್ಲಾಹ್, ಉಳಿದ ಪ್ರಸ್ತಾಪ ಮುಂದಿನ ಬಾರಿ ಮಾಡುತ್ತೇನೆ. ಪ್ರತಿ ಜುಮಾದಲ್ಲಿ ನಾನು ಪಾಕಿಸ್ತಾನದ ಜನರಿಗಾಗಿ, ಅಲ್ಲಿನ ಅಹ್ಮದಿಯರಿಗಾಗಿ ದುಆ ಮಾಡಲು ಹೇಳುತ್ತಿದ್ದೇನೆ. ಅವರಿಗಾಗಿ ದುಆ ಮಾಡುತ್ತಿರಿ. ಎದುರಾಳಿಗಳು ತಮ್ಮ ಭಾವನೆಯಲ್ಲಿ ನಮ್ಮ ಕರ್ಮರಂಗವನ್ನು ಸಂಕುಚಿತಗೊಳಿಸುತ್ತಿದ್ದಾರೆ. ಆದರೆ ಅತ್ಯುನ್ನತನಾದ ಅಲ್ಲಾಹನು ಸಹ ಇದ್ದಾನೆ ಮತ್ತು ಅವನ ವಿಧಿ ಸಹ ಚಾಲ್ತಿಯಲ್ಲಿದೆ ಎಂದು ಅವರಿಗೆ ಗೊತ್ತಿಲ್ಲ. ಅವನು ತನ್ನ ವಲಯವನ್ನು ಅವರ ಮೇಲೆ ಸಂಕುಚಿತಗೊಳಿಸುತ್ತಿದ್ದಾನೆ. ಆ ವಲಯ ಸಂಕುಚಿತಗೊಂಡರೆ, ಅದರಿಂದ ಪರಾರಿಯಾಗಲು ಯಾರಿಗೂ ಸಾಧ್ಯವಿಲ್ಲ. ಅಲ್ಲಾಹನು ಆ ಜನರಿಗೆ ಬುದ್ಧಿಕೊಡಲಿ. ಅವರು ಈಗಲಾದರೂ ವಿವೇಕದಿಂದ ವರ್ತಿಸಬೇಕು, ನ್ಯಾಯದಿಂದ ನಡೆಯಬೇಕು, ಅನಾವಶ್ಯಕವಾದ ದೌರ್ಜನ್ಯ ಮತ್ತು ಅತಿರೇಕದಿಂದ ಬಿಟ್ಟು ನಿಲ್ಲಬೇಕು. ಅದೇ ರೀತಿಯಲ್ಲಿ ಅಲ್ಜೀರಿಯಾದ ಜನರಿಗಾಗಿಯೂ ದುಆ ಮಾಡಿರಿ. ಅವರು ಈಮಾನಿನಲ್ಲಿ ನೆಲೆಯೂರುವಂತೆ ಆಗಲಿ. ಅದೇ ರೀತಿಯಲ್ಲಿ ಬೇರೆ ಕೆಲವು ಸ್ಥಳಗಳಲ್ಲಿಯೂ ಅಹ್ಮದಿಯರನ್ನು ಶಕ್ತವಾಗಿ ವಿರೋಧಿಸಲಾಗುತ್ತಿದೆ. ಅಲ್ಲಾಹನು ಪ್ರತಿಯೊಂದು ಸ್ಥಳದಲ್ಲಿ, ಪ್ರತಿಯೊಬ್ಬ ಅಹ್ಮದಿಯನ್ನು ಎಲ್ಲ ರೀತಿಯಲ್ಲಿ ಸಂರಕ್ಷಿಸಲಿ.

(ಖುತ್‌ಬದ ಕೊನೆಯಲ್ಲಿ ಹುಝೂರ್ ಇತ್ತೀಚೆಗೆ ನಿಧನರಾದ ರಬ್ವದ ಮಾಜಿ ನಾಝಿರ್ ಇಸ್ಲಾಹೋ ಇರ್ಶಾದ್ ಮರ್ಕಝಿಯ – ಸನ್ಮಾನ್ಯ ಮೌಲಾನ ಸುಲ್ತಾನ್ ಮಹ್ಮೂದ್ ಅನ್ವರ್ ಸಾಹಿಬ್, ಖಾದಿಯಾನಿನ ಮಾಜಿ ನಾಝಿರ್ ಇಸ್ಲಾಹೋ ಇರ್ಶಾದ್ ಮರ್ಕಝಿಯ – ಸನ್ಮಾನ್ಯ ಮೌಲಾನ ಮುಹಮ್ಮದ್ ಉಮರ್ ಸಾಹಿಬ್, ರಬ್ವದ ಮುರಬ್ಬಿಯಾದ ಸನ್ಮಾನ್ಯ ಹಬೀಬ್ ಅಹ್ಮದ್ ಸಾಹಿಬ್, ಯು.ಕೆ.ಯ ಸನ್ಮಾನ್ಯ ಬದ್ರುಝ್ಝಮಾನ್ ಸಾಹಿಬ್, ರಬ್ವದ ಸನ್ಮಾನ್ಯ ಮನ್ಸೂರ್ ಅಹ್ಮದ್ ತಹ್ಸೀನ್ ಸಾಹಿಬ್, ತನ್ಝಾನಿಯದ ಸನ್ಮಾನ್ಯ ಡಾಕ್ಟರ್ ಐದಿ ಇಬ್ರಾಹೀಂ ಮವಾಂಗ ಸಾಹಿಬ್, ಖಾದಿಯಾನಿನ ದರ್ವೇಶ್ ಆದ ಸನ್ಮಾನ್ಯ ದೀನ್ ಮುಹಮ್ಮದ್ ನಂಗ್ಲೀ ಸಾಹಿಬರ ಪತ್ನಿಯಾದ ಸನ್ಮಾನ್ಯ ಸುಗ್ರ ಬೇಗಂ ಸಾಹಿಬ, ಯು.ಕೆ.ಯ ಸನ್ಮಾನ್ಯ ಚೌಧರಿ ಕರಾಮತುಲ್ಲಾಹ್ ಸಾಹಿಬ್, ಜರ್ಮನಿಯ ಸನ್ಮಾನ್ಯ ಚೌಧರಿ ಮುನವ್ವರ್ ಅಹ್ಮದ್ ಖಾಲಿದ್ ಸಾಹಿಬ್, ಬಾಂಗ್ಲಾದೇಶದ ನಸೀರ ಬೇಗಂ ಸಾಹಿಬ ಮತ್ತು ಸನ್ಮಾನ್ಯ ರಫೀಉದ್ದೀನ್ ಬಟ್ ಸಾಹಿಬ್ ಇವರ ಸ್ವಭಾವ ವೈಶಿಷ್ಟ್ಯಗಳನ್ನು ವಿವರಿಸಿದರು. ಹುಝೂರ್ ಹೇಳಿದರು:) ಅಲ್ಲಾಹನು ಈ ಎಲ್ಲ ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ, ತನ್ನ ಪ್ರಿಯರ ಸಾಮಿಪ್ಯದಲ್ಲಿ ಇರಿಸಲಿ. ನಮಾಝಿನ ನಂತರ ಇವರ ಜನಾಝ ಗಾಇಬ್ ನಿರ್ವಹಿಸುವೆನು.

(ಜನವರಿ 12ನೇ ತಾರೀಕಿನಂದು ಖಾದಿಯಾನ್‌ನಲ್ಲಿ ನಿಧನರಾದ ಮಾಜಿ ಇಸ್ಲಾಹೋ ಇರ್ಶಾದ್ ನಾಝಿರ್, ಸನ್ಮಾನ್ಯ ಮೌಲಾನಾ ಮುಹಮ್ಮದ್ ಉಮರ್ ಸಾಹಿಬರ ಕುರಿತು ಪ್ರಸ್ತಾಪಿಸುತ್ತಾ ಹುಝೂರ್ ಈರೀತಿ ಹೇಳಿದರು:) ಮೌಲಾನ ಮುಹಮ್ಮದ್ ಉಮರ್ ಸಾಹಿಬ್ ಖಾದಿಯಾನಿನ ಮಾಜಿ ನಾಝಿರ್ ಇಸ್ಲಾಹೋ ಇರ್ಶಾದ್ ಮರ್ಕಝಿಯಾ ಆಗಿದ್ದರು. ಅವರು ಪಿ.ಕೆ. ಇಬ್ರಾಹೀಂ ಸಾಹಿಬ್‌ರ ಮಗನಾಗಿದ್ದರು. ಜನವರಿ 12ರಂದು 87ನೇ ವಯಸ್ಸಿನಲ್ಲಿ ನಿಧನರಾದರು – **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಕೇರಳದವರಾಗಿದ್ದರು.... ಮೌಲಾನ ಉಮರ್ ಸಾಹಿಬ್‌ರು 1954ರಲ್ಲಿ ಖಾದಿಯಾನಿಗೆ ಬಂದರು. ಆಗ ದೇಶದ ವಿಭಜನೆ ನಂತರ ಜಾಮಿಅ ಅಹ್ಮದಿಯಾ ಪುನಃ ಶುರುವಾಗಿತ್ತು. 1955ರಲ್ಲಿ ಮದ್ರಸದಲ್ಲಿ ಪ್ರವೇಶಿಸಿದರು. 1961ರಲ್ಲಿ ಮದ್ರಸ ಅಹ್ಮದಿಯಾ ಮತ್ತು ಪಂಜಾಬ್ ಯೂನಿವರ್ಸಿಟಿಯಿಂದ ಮೌಲವಿ ಫಾಝಿಲ್ ಪರೀಕ್ಷೆ ತೇರ್ಗಡೆ ಮಾಡಿದ ನಂತರ ಒಂದು ವರ್ಷ ತನಕ ಮದ್ರಸದಲ್ಲಿ ಕಲಿಸುತ್ತಿದ್ದರು. 1962ರಿಂದ ತಬ್ಲೀಗಿನ ಮೈದಾನದಲ್ಲಿ ಸೇವೆ ಸಲ್ಲಿಸಲು ಶುರುಮಾಡಿದರು. ಭಾರತದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೆಲಸ ಮಾಡಿದ್ದರು. ಅವರು ಬಹಳ ವಿಜಯಿ ಮುಬಲ್ಲಿಗ್‌ರೆಂಬ ನೆಲೆಯಲ್ಲಿ ಸೇವೆ ಸಲ್ಲಿಸುತ್ತಾ ಇದ್ದರು. ತಬ್ಲೀಗಿನ ಸಭೆಗಳಲ್ಲಿ ಅವರ ಭಾಷಣಗಳು ಇರುತ್ತಿದ್ದುವು. ಯಾದ್‌ಗೀರ್‌ನಲ್ಲಿ ನಡೆದ ಸಂವಾದದಲ್ಲಿ ಭಾಗವಹಿಸಿದ್ದರು. ಹಝ್‌ರತ್ ಖಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್‌ರ ವಿಶೇಷ ಮಾರ್ಗದರ್ಶನದಲ್ಲಿ ನಡೆದ ಕೋಯಂಬತ್ತೂರಿನ ಚಾರಿತ್ರಿಕ ಸಂವಾದದಲ್ಲಿ ಬಹಳ ಮುಖ್ಯ ಪಾತ್ರ ವಹಿಸಿದ್ದರು.

ಹಝ್‌ರತ್ ಖಲೀಫತುಲ್ ಮಸೀಹ್ ರಾಬಿಅ್ ಒಂದು ಕಡೆ ಇವರ ಕೆಲಸವನ್ನು ಪ್ರಶಂಸಿಸುತ್ತಾ ತನ್ನ ಒಂದು ಖುತ್‌ಬದಲ್ಲಿ ಹೀಗೆ ಹೇಳಿದ್ದರು: "....ನಮ್ಮ ಮುಬಲ್ಲಿಗ್‌ರಾದ ಮೌಲವಿ ಉಮರ್ ಸಾಹಿಬ್‌ರಿಗೆ ಅಲ್ಲಾಹನು ಎಂತಹ ಆವೇಶವನ್ನು

ನೀಡಿದ್ದಾನೆ ಎಂದರೆ, ಇಲ್ಲಿಂದ ಅವರ ಕಿವಿಗೆ ಏನಾದರೂ ಶಬ್ದ ತಲುಪುವಾಗ ಅವರು ಬೇಗನೇ ಅದರ ತರ್ಜುಮೆಗಳನ್ನು ಮಾಡಿಕೊಂಡು ಎಲ್ಲ ಜಮಾಅತುಗಳಿಗೆ ಅದನ್ನು ತಲುಪಿಸುತ್ತಿದ್ದರು. ಬಹಳ ಪರಿಶ್ರಮದಿಂದ ಅವರು ಆ ಕೆಲಸ ಮಾಡುತ್ತಿದ್ದರು.” ಸುಮಾರು ಒಂದು ವರ್ಷ ಫೆಲಸ್ತೀನಿನಲ್ಲಿ ಸಹ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಹಲವಾರು ಪುಸ್ತಕಗಳನ್ನು ಮಲಯಾಳಂ ಮತ್ತು ತಮಿಳು ಭಾಷೆಗಳಲ್ಲಿ ತರ್ಜುಮೆ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. 2007ರಲ್ಲಿ ನಾನು ಅವರನ್ನು ನಾಝಿರ್ ಇಸ್ಲಾಹೋ ಇರ್ಶಾದ್ ಮರ್ಕಝಿಯ ಎಂಬ ನೆಲೆಯಲ್ಲಿ ಅನಂತರ ಎಡಿಶನಲ್ ನಾಝಿರ್ ಇಸ್ಲಾಹೋ ಇರ್ಶಾದ್ ತಅ್‌ಲೀಮುಲ್ ಖುರ್‌ಆನ್ ಮತ್ತು ವಖ್ಫೇ ಆರ್‌ಝಿಯಾಗಿ ನಿಶ್ಚಯಿಸಿದೆ. ಅನಂತರ ನಾಇಬ್ ನಾಝಿರ್ ಅಅ್‌ಲಾ ಆಗಿ ಸೇವೆ ಸಲ್ಲಿಸಲು ಸಹ ಸೌಭಾಗ್ಯ ಪಡೆದರು. ಬಹಳ ಉತ್ತಮ ರೀತಿಯಲ್ಲಿ ಅವರು ಎಲ್ಲ ಸೇವೆಗಳನ್ನು ನಿರ್ವಹಿಸಿದ್ದರು. ಮದ್ರಸ ಅಹ್ಮದಿಯಾದಿಂದ ತೇರ್ಗಡೆಯಾದ ನಂತರ ಅವರಿಗೆ ಒಟ್ಟು 53 ವರ್ಷಗಳ ಕಾಳ ಜಮಾಅತಿನ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಅವರು ನಾಲ್ಕು ಪುತ್ರಿಯರನ್ನು, ಅಳಿಯಂದಿರನ್ನು, ಮೊಮ್ಮಕ್ಕಳನ್ನು ಮತ್ತು ಮೊಮ್ಮಕ್ಕಳ ಮಕ್ಕಳನ್ನು ಅಗಲಿರುವರು. ಅವರು ಜಮಾಅತಿನ ಸೇವೆಯ ಆವೇಶವನ್ನು ಹೊಂದಿದ್ದರು. ಕುಟುಂಬದೊಂದಿಗೆ ವೈಯಕ್ತಿಕ ಯಾತ್ರೆಯಲ್ಲಿ ಇರುವಾಗಲೂ ಜಮಾಅತಿನ ಕೆಲಸಗಳಲ್ಲಿ ವಿಶೇಷವಾಗಿ ತರ್ಜುಮೆಯ ಕೆಲಸಗಳಲ್ಲಿ ನಿರತರಾಗುತ್ತಿದ್ದರು.

ಶ್ರೀಲಂಕಾದ ನ್ಯಾಶನಲ್ ಸದರ್ ಸಾಹಿಬ್ ಬರೆಯುತ್ತಾರೆ: ಹಝ್ರತ್ ಖ಼ಲೀಫತುಲ್ ಮಸೀಹ್ ಸಾಲಿಸ್ ರಹ್ಮಹುಲ್ಲಾಹ್‌ರ ಅನುಗ್ರಹೀತ ನೇತೃತ್ವದಲ್ಲಿ ಮೌಲಾನ ಸಾಹಿಬ್‌ರ ಮೊದಲ ಪೋಸ್ಟಿಂಗ್ ಕೇಂದ್ರ ಮುಬಲ್ಲಿಗ್ ಎಂಬ ನೆಲೆಯಲ್ಲಿ 1978ರಲ್ಲಿ ಅಲ್ಲಾಹನ ಅನುಗ್ರಹದಿಂದ ಆದ ಸುವರ್ಣ ಕಾಲವು ಅಹ್ಮದಿಯಾ ಜಮಾಅತ್ ಶ್ರೀಲಂಕಾದ ಚರಿತ್ರೆಯಲ್ಲಿ ಸದಾ ಸುರಕ್ಷಿತವಾಗಿರುವುದು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ನಾಲ್ಕು ಗ್ರಂಥಗಳನ್ನು ತಮಿಳು ಭಾಷೆಯಲ್ಲಿ ತರ್ಜುಮೆ ಮಾಡಿದ್ದರು. ವಿವಿಧ ವಿಷಯಗಳಲ್ಲಿ ಏಳು ಪುಸ್ತಕಗಳನ್ನು ತಮಿಳು ಭಾಷೆಯಲ್ಲಿ ಸ್ವತಃ ಬರೆದರು. **ಸಮಾಧಾನ ವಝೀ** ಎಂಬ ಜಮಾಅತಿನ ನಿಯತಕಾಲಿಕವನ್ನು ಶುರುಮಾಡಿ ತಮಿಳುನಾಡಿನಿಂದ ಪ್ರಕಟಿಸುತ್ತಿದ್ದರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಪರಿಪೂರ್ಣ ನಿಷ್ಠೆಯಿಂದ ಜಮಾಅತಿನೊಂದಿಗೆ ಸಂಬಂಧವಿರಿಸಲು ಸೌಭಾಗ್ಯ ನೀಡಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ وَنَشْهَدُ اَنْ لَّا اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 22-01-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon